ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	7 (029)
ಸದಸ್ಯರ ಹೆಸರು	:	ಶ್ರೀ ಎಂ.ಎಲ್. ಅನಿಲ್ ಕುಮಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸಬೇಕಾದ ದಿನಾಂಕ	:	15-02-2022
ಉತ್ತರಿಸುವ ಸಚಿವರು	:	ಮಾನ್ಯ ಪೌರಾಡಳಿತ, ಸಣ್ಣ ಕೈಗಾರಿಕೆಗಳು ಹಾಗೂ ಸಾರ್ವಜನಿಕ ವಲಯ ಉದ್ಯಮಗಳ ಸಚಿವರು

ಕ್ರ. ಸಂ.	ಪ್ರಶ್ನೆ	ಉತ್ತರ
(ಅ)	ಕೋಲಾರ ಹಾಗೂ ಚಿಕ್ಕಬಳ್ಳಾಪುರ ಜಿಲ್ಲೆಯ ಪಟ್ಟಣ ಪಂಚಾಯತಿಗಳು, ಪುರಸಭೆಗಳು ಮೂಲಭೂತ ಸೌಲಭ್ಯಗಳ ಕೊರತೆಯಿಂದ ಬಳಲುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿರುತ್ತದೆ.
(ಆ)	ಹಾಗಿದ್ದಲ್ಲಿ, ಕೋಲಾರ ಹಾಗೂ ಚಿಕ್ಕಬಳ್ಳಾಪುರ ಜಿಲ್ಲೆಯ ಪಟ್ಟಣ ಪಂಚಾಯತಿಗೆ ಹಾಗೂ ಪುರಸಭೆಗಳಿಗೆ ಅಗತ್ಯ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು;	ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಬರುವ ಪಟ್ಟಣ ಪಂಚಾಯಿತಿ ಮತ್ತು ಪುರಸಭೆಗಳಿಗೆ ಕೇಂದ್ರ ಪುರಸ್ಕೃತ ಸ್ವಚ್ಛ ಭಾರತ ಯೋಜನೆಯಡಿ ಮೂಲಭೂತ ಸೌಕರ್ಯಗಳಾದ ವೈಯಕ್ತಿಕ ಶೌಚಲಯಗಳ ನಿರ್ಮಾಣ, ಸಾರ್ವಜನಿಕ/ ಸಮುದಾಯ ಶೌಚಾಲಯಗಳ ನಿರ್ಮಾಣ, ಘನತ್ಯಾಜ್ಯ ವಸ್ತು ನಿರ್ವಹಣೆ ಕಾಮಗಾರಿಗಳಿಗೆ ರೂ.8.49 ಕೋಟಿಗಳ ಅನುದಾನವನ್ನು ಬಿಡುಗಡೆ ಮಾಡಲಾಗಿರುತ್ತದೆ. (ವಿವರಗಳನ್ನು ಅನುಬಂಧ-1 ರಲ್ಲಿ ಲಗತ್ತಿಸಿದೆ). • **<u>ಎಸ್.ಎಫ್.ಸಿ ಮುಕ್ತನಿಧಿ ಅನುದಾನ:</u>** ಮೂಲಭೂತ ಸೌಕರ್ಯ ಕಲ್ಪಿಸಲು 1) ಕುಡಿಯುವ ನೀರು 2) ತರಕಾರಿ ಮಾರುಕಟ್ಟೆ 3)ಮಾಂಸ, ಕೋಳಿ ಹಾಗೂ ಮೀನು ಮಾರುಕಟ್ಟೆ 4)ಸಣ್ಣ ಪ್ರಮಾಣದ ಮಾರುಕಟ್ಟೆ ನಿರ್ಮಾಣ 5)ಸಾರ್ವಜನಿಕ ಶೌಚಾಲಯಗಳ ನಿರ್ಮಾಣ ಮಾಡುವುದು 6)ಸ್ಮಶಾನ ಅಭಿವೃದ್ಧಿ 7)ಆಂತರಿಕ ರಸ್ತೆಗಳ ಮತ್ತು ಚರಂಡಿಗಳ ನಿರ್ಮಾಣ ಮಾಡಲು ಅವಕಾಶ ಕಲ್ಪಿಸಲಾಗಿದೆ. • **ಎಸ್.ಎಫ್.ಸಿ ಕುಡಿಯುವ ನೀರು:** 1)ಕೊಳವೆ ಬಾವಿಗಳನ್ನು ಆಳಗೊಳಿಸುವುದು/ ಸ್ವಚ್ಛಗೊಳಿಸುವುದು 2) ಹೈಡ್ರೋಫ್ಯಾಕ್ಟರಿಂಗ್ 3) ನೀರು ಸರಬರಾಜು ಪೈಪುಗಳ ದುರಸ್ಥಿ/ ಬದಲಾವಣೆ 4) ಹೊಸ ಕೊಳವೆ ಬಾವಿಗಳನ್ನು ಕೊರೆಯಲು ಹಾಗೂ ಪಂಪು ಮೋಟಾರ್ ಅಳವಡಿಸುವ ಕಾಮಗಾರಿ 5) ಕುಡಿಯುವ ನೀರು ಸರಬರಾಜು ಕಾಮಗಾರಿಗಳಿಗೆ ಅವಶ್ಯವಿರುವ ಪಂಪು ಮೋಟಾರ್, ಪೈಪ್ ಲೈನ್ ಮತ್ತು ಇತರೆ ಸಲಕರಣೆಗಳ ಸಂಗ್ರಹಣೆ ಮೊದಲಾದ ಕಾಮಗಾರಿಗಳನ್ನು ತೆಗೆದುಕೊಳ್ಳಲು ಅವಕಾಶ ಕಲ್ಪಿಸಲಾಗಿದೆ. • ಎಸ್.ಎಫ್.ಸಿ ವಿಶೇಷ ಅನುದಾನದಡಿ ಮಾನ್ಯ ಮುಖ್ಯಮಂತ್ರಿಗಳ ವಿವೇಚನಾನುಸಾರ ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ನಗರ ಸ್ಥಳೀಯ ಸಂಸ್ಥೆಗಳಿಗೆ ಮಂಜೂರು ಮಾಡಲು ಅವಕಾಶ ಕಲ್ಪಿಸಲಾಗಿದೆ.

ಕ್ರ. ಸಂ.	ಪ್ರಶ್ನೆ	ಉತ್ತರ
		ಕೋಲಾರ ಹಾಗೂ ಚಿಕ್ಕಬಳ್ಳಾಪುರ ಜಿಲ್ಲೆಯ ಪಟ್ಟಣ ಪಂಚಾಯಿತಿಗೆ ಹಾಗೂ ಪುರಸಭೆಗಳಿಗೆ ಸಂಬಂಧಿಸಿದಂತೆ, 2016-17ನೇ ಸಾಲಿನಿಂದ ನಗರೋತ್ಥಾನ (ಮುನಿಸಿಪಾಲಿಟಿ) 3ನೇ ಹಂತದ ಯೋಜನೆಯಡಿ ಅಗತ್ಯ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಲಾಗಿದೆ. **15ನೇ ಹಣಕಾಸು ಆಯೋಗದ ಅನುದಾನ:** ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿನ ಪಟ್ಟಣ ಪಂಚಾಯಿತಿಗಳು ಹಾಗೂ ಪುರಸಭೆಗಳಿಗೆ ಅಗತ್ಯ ಮೂಲಭೂತ ಸೌಕರ್ಯಗಳನ್ನು ಒದಗಿಸಲು 2020-21 ಮತ್ತು 2021-22ನೇ ಸಾಲಿನಲ್ಲಿ 15ನೇ ಹಣಕಾಸು ಆಯೋಗದ ಅನುದಾನವನ್ನು ಹಂಚಿಕೆ ಮಾಡಿ ಬಿಡುಗಡೆಗೊಳಿಸಲಾಗಿದೆ. ವಿವರಗಳನ್ನು **ಅನುಬಂಧ-2** ರಲ್ಲಿ ಲಗತ್ತಿಸಿದೆ.
(ಇ)	ಕೋಲಾರ-ಚಿಕ್ಕಬಳ್ಳಾಪುರ ಜಿಲ್ಲೆಯ ಯಾವ ಯಾವ ಮತ್ತು ಎಷ್ಟು ಪಟ್ಟಣ ಪಂಚಾಯತಿಗಳಿಗೆ, ಪುರಸಭೆಗಳಿಗೆ ಅಗತ್ಯ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಲಾಗಿದೆ;	ಕೋಲಾರ ಜಿಲ್ಲೆಯ ವೇಮಗಲ್-ಕುರುಗಲ್ ಪಟ್ಟಣ ಪಂಚಾಯಿತಿಯು ಇತ್ತೀಚೆಗಷ್ಟೆ ಹೊಸದಾಗಿ ಮೇಲ್ದರ್ಜೆಗೇರಿರುವ ನಗರ ಸ್ಥಳೀಯ ಸಂಸ್ಥೆಯಾಗಿದ್ದು ಇದನ್ನು ಹೊರತು ಪಡಿಸಿ ಉಳಿದ ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಯ ಎಲ್ಲಾ ಪಟ್ಟಣ ಪಂಚಾಯಿತಿ ಮತ್ತು ಪುರಸಭೆಗಳಿಗೆ ಸ್ವಚ್ಚ ಭಾರತ ಯೋಜನೆಯಡಿ ಮೂಲಭೂತ ಸೌಕರ್ಯ ಕಲ್ಪಿಸಲಾಗಿರುತ್ತದೆ. ಕೋಲಾರ-ಚಿಕ್ಕಬಳ್ಳಾಪುರ ಜಿಲ್ಲೆಯ ಪುರಸಭೆ ಮತ್ತು ಪಟ್ಟಣ ಪಂಚಾಯಿತಿಗಳಿಗೆ ಮೂಲಭೂತ ಸೌಲಭ್ಯಗಳಿಗೆ ಎಸ್.ಎಫ್.ಸಿ ಮುಕ್ತನಿಧಿ/ ಎಸ್.ಎಫ್.ಸಿ ಕುಡಿಯುವ ನೀರಿನ ಅನುದಾನದಡಿ 2018-19 ರಿಂದ 2020-21 ನೇ ಸಾಲಿನವರೆಗೆ ಮಂಜೂರು ಮಾಡಲಾದ ಅನುದಾನದ ವಿವರಗಳನ್ನು **ಅನುಬಂಧ-3** ರಲ್ಲಿ ಲಗತ್ತಿಸಿದೆ ಕೋಲಾರ ಜಿಲ್ಲೆಯ ಶ್ರೀನಿವಾಸಪುರ ಮತ್ತು ಮಾಲೂರು ಪುರಸಭೆಗಳು ಹಾಗೂ ಚಿಕ್ಕಬಳ್ಳಾಪುರ ಜಿಲ್ಲೆಯ ಬಾಗೇಪಲ್ಲಿ ಪುರಸಭೆ ಹಾಗೂ ಗುಡಿಬಂಡೆ ಪಟ್ಟಣ ಪಂಚಾಯಿತಿಗಳಿಗೆ ಈಗಾಗಲೇ ನಗರೋತ್ಥಾನ (ಮುನಿಸಿಪಾಲಿಟಿ) 3ನೇ ಹಂತದ ಯೋಜನೆಯಡಿ ಅಗತ್ಯ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಲಾಗಿದೆ. ವಿವರಗಳನ್ನು **ಅನುಬಂಧ-4 ಮತ್ತು ಅನುಬಂಧ-5** ರಲ್ಲಿ ಲಗತ್ತಿಸಿದೆ. ಕೋಲಾರ-ಚಿಕ್ಕಬಳ್ಳಾಪುರ ಜಿಲ್ಲೆಯ ಎಲ್ಲಾ ಪಟ್ಟಣ ಪಂಚಾಯಿತಿ ಮತ್ತು ಪುರಸಭೆಗೆ ಅಗತ್ಯ ಮೂಲಭೂತ ಸೌಕರ್ಯಗಳನ್ನು ಹಂತ ಹಂತವಾಗಿ ಸರ್ಕಾರದಿಂದ ವಿವಿಧ ಯೋಜನೆಯಡಿ ಲಭ್ಯವಾಗುವ ಅನುದಾನದಿಂದ ಕಲ್ಪಿಸಲಾಗುತ್ತದೆ. ಮೂಲಭೂತ ಸೌಲಭ್ಯಗಳ ಕೊರತೆಯನ್ನು ಸರ್ಕಾರದಿಂದ ರೂಪಿಸಲಾಗುವ ವಿವಿಧ ಯೋಜನೆಯಡಿ ಹಂತ ಹಂತವಾಗಿ ಕಲ್ಪಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. 15ನೇ ಹಣಕಾಸು ಆಯೋಗದ ನಿರ್ಬಂಧಿತ ಅನುದಾನದಲ್ಲಿ ಕುಡಿಯುವ ನೀರು ಸರಬರಾಜು ಮತ್ತು ಘನತ್ಯಾಜ್ಯ ವಸ್ತು ನಿರ್ವಹಣೆಯ ಕಾಮಗಾರಿಗಳನ್ನು ಕೈಗೊಳ್ಳಲು ಕಡ್ಡಾಯಗೊಳಿಸಲಾಗಿದೆ ಮತ್ತು ಮುಕ್ತನಿಧಿ ಅನುದಾನದಡಿ ಇತರೆ ಮೂಲಭೂತ ಸೌಕರ್ಯಗಳನ್ನು ಪಟ್ಟಣದ

ಕ್ರ. ಸಂ.	ಪ್ರಶ್ನೆ	ಉತ್ತರ
		ಅವಶ್ಯಕತೆಗನುಗುಣವಾಗಿ ಮತ್ತು ಅನುದಾನದ ಲಭ್ಯತೆಗನುಸಾರವಾಗಿ ಕೈಗೊಳ್ಳಲು ಮಾರ್ಗಸೂಚಿಯನ್ನು ಹೊರಡಿಸಲಾಗಿದೆ.
(ಈ)	ಬಾಕಿ ಇನ್ನೂ ಎಷ್ಟು ಪಟ್ಟಣ ಪಂಚಾಯತಿಗಳಿಗೆ, ಪುರಸಭೆಗಳಿಗೆ ಅಗತ್ಯ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಬೇಕಾಗಿದೆ; (ವಿವರ ಒದಗಿಸುವುದು)	ಕೋಲಾರ ಜಿಲ್ಲೆಯ ವೇಮಗಲ್-ಕುರುಗಲ್ ಪಟ್ಟಣ ಪಂಚಾಯಿತಿಯು ಹೊಸದಾಗಿ ಮೇಲ್ದರ್ಜೆಗೇರಿರುವ ನಗರ ಸ್ಥಳೀಯ ಸಂಸ್ಥೆಯಾಗಿದ್ದು, ಸದರಿ ನಗರ ಸ್ಥಳೀಯ ಸಂಸ್ಥೆಯು ಸ್ವಚ್ಛ ಭಾರತ ಯೋಜನೆಯ ಮಾರ್ಗಸೂಚಿಗಳ್ವಯ ಪ್ರಸ್ತಾವನೆಯನ್ನು ಸಲ್ಲಿಸಿದ ನಂತರ ಮೂಲಭೂತ ಸೌಕರ್ಯ ಒದಗಿಸಲು ಅನುದಾನ ಬಿಡುಗಡೆ ಮಾಡಲಾಗುವುದು. ಕೋಲಾರ-ಚಿಕ್ಕಬಳ್ಳಾಪುರ ಜಿಲ್ಲೆಯ ಪುರಸಭೆ ಮತ್ತು ಪಟ್ಟಣ ಪಂಚಾಯಿತಿಗಳಿಗೆ ಮೂಲಭೂತ ಸೌಕರ್ಯಕ್ಕೆ ಎಸ್.ಎಫ್.ಸಿ ಮುಕ್ತನಿಧಿ/ ಎಸ್.ಎಫ್.ಸಿ ಕುಡಿಯುವ ನೀರಿನ ಅನುದಾನಗಳನ್ನು ಹಂತ-ಹಂತವಾಗಿ ಮಂಜೂರು ಮಾಡಲಾಗುತ್ತಿರುತ್ತದೆ. ಕೋಲಾರ ಜಿಲ್ಲೆಯ ವೇಮಗಲ್ ಕುರುಗಲ್ ಪಟ್ಟಣ ಪಂಚಾಯಿತಿಯು ಹೊಸದಾಗಿ ಮೇಲ್ದರ್ಜೆಗೇರಿರುವುದರಿಂದ ಮುಖ್ಯಮಂತ್ರಿಗಳ ಅಮೃತ್ ನಗರೋತ್ಥಾನ (ಮುನಿಸಿಪಾಲಿಟಿ) ಯೋಜನೆ ಹಂತ-4ರಡಿ ಸೇರ್ಪಡೆಗೊಂಡಿರುತ್ತದೆ ಹಾಗೂ ರಾಜ್ಯದ ಎಲ್ಲಾ ಪುರಸಭೆ ಮತ್ತು ಪಟ್ಟಣ ಪಂಚಾಯಿತಿಗಳು ಸಹ ಸೇರ್ಪಡೆಗೊಂಡಿರುತ್ತದೆ. ಮೂಲಭೂತ ಸೌಲಭ್ಯಗಳನ್ನು ಪಟ್ಟಣಗಳು ಬೆಳೆದಂತೆ ಹಂತ ಹಂತವಾಗಿ ಅನುದಾನದ ಲಭ್ಯತೆಗನುಗುಣವಾಗಿ ಒದಗಿಸಲಾಗುತ್ತದೆ.
(ಉ)	ಯಾವ ಕಾಲಮಿತಿಯಲ್ಲಿ ಇವುಗಳಿಗೆ ಅಗತ್ಯ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಲಾಗುವುದು ?	ಈಗಾಗಲೇ ಹೊಸದಾಗಿ ಮೇಲ್ದರ್ಜೆಗೇರಿರುವ ನಗರ ಸ್ಥಳೀಯ ಸಂಸ್ಥೆಗಳಿಗೆ ಸ್ವಚ್ಛ ಭಾರತ ಯೋಜನೆಯ ಮಾರ್ಗಸೂಚಿಗಳ್ವಯ ಪ್ರಸ್ತಾವನೆ ಸಲ್ಲಿಸಲು ತಿಳಿಸಲಾಗಿದ್ದು, ಪ್ರಸ್ತಾವನೆ ಸ್ವೀಕೃತವಾದ ನಂತರ ಹಂತ ಹಂತವಾಗಿ ಹಣದ ಲಭ್ಯತೆಗನುಗುಣವಾಗಿ ಅಗತ್ಯ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಲಾಗುವುದು.

ಕಡತ ಸಂಖ್ಯೆ:ನಅಇ 38 ಎಸ್.ಎಫ್.ಸಿ 2022

[ಎನ್. ನಾಗರಾಜ್ (ಎಂ.ಟಿ.ಬಿ)]
ಪೌರಾಡಳಿತ ಮತ್ತು ಸಣ್ಣ ಕೈಗಾರಿಕೆ ಹಾಗೂ
ಸಾರ್ವಜನಿಕ ಉದ್ದಿಮೆಗಳ ಸಚಿವರು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 29 ಕ್ಕೆ ಅನುಬಂಧ - I

ಅನುಬಂಧ-1

Release of funds for SBM to Chikballapura & Kolar Districts TMC's & TP's(Rs in lakhs)				
Sl. No.	ULB Name	IHHL	CT/PT	SWM
	Chikballapura			
1	Bagepalli (TMC)	50.52	0.00	119.31
2	Gudibanda (TP)	22.19	2.77	84.79
	Total	72.71	2.77	204.10
	Kolar			
1	Bangarapet (TMC)	42.67	19.07	136.79
2	Malur (TMC)	35.27	17.33	194.65
3	Srinivaspur (TMC)	22.19	5.20	96.59
	Total	100.12	41.60	428.03

Geetha M. C
(MIS-specialist)

Executive Engineer
Directorate of Municipal Administration
Bangalore.

ಅನುಬಂಧ-~~01~~ ೦೨

(ರೂ. ಲಕ್ಷಗಳಲ್ಲಿ)

	ನ.ಸ್ಥ.ಸಂ	2020-21ನೇ ಸಾಲು		2021-22ನೇ ಸಾಲು	
		ಹಂಚಿಕೆ	ಬಿಡುಗಡೆ	ಹಂಚಿಕೆ	ಬಿಡುಗಡೆ
ಕೋಲಾರ ಜಿಲ್ಲೆ	ಬಂಗಾರಪೇಟೆ ಪುರಸಭೆ	262	262	194	97.00
	ಮಾಲೂರು ಪುರಸಭೆ	247	247	184	92.00
	ಶ್ರೀನಿವಾಸಪುರ ಪುರಸಭೆ	147	147	110	55.00
ಚಿಕ್ಕಬಳ್ಳಾಪುರ ಜಿಲ್ಲೆ	ಬಾಗೇಪಲ್ಲಿ ಪುರಸಭೆ	175	175	131	65.50
	ಗುಡಿಬಂಡೆ ಪ.ಪಂ	80	80	60	30.00

Joint Director (Development)
Directorate of Municipal
Administration
Bengaluru

ಅನುಬಂಧ - 03

ABSTRACT REPORT

SFC UNTIED PROGRAMME

Rs. in Lakhs

1	2	4	5	6	7	8	9	10	11
SL.NO.	District	Name Of the Town	ULB Type	Year	Financial Progress (Rs.in Lakhs)			Physical Progress	
					Grants Allocation	Grants Released	Expenditure	Total Approved Works	Completed Works
1	Kolar	Bangarpet	TMC	2020-21	54.42	54.42	50.7	14	10
3	Kolar	Malur	TMC	2020-21	52.32	52.32	43.8001	7	5
6	Kolar	Srinivasapura	TMC	2020-21	30.2	30.2	22.41	11	0
				Total	**136.94**	**136.94**	**116.9101**	**32**	**15**
1	Kolar	Bangarpet	TMC	2021-22	72	54	40.4	9	1
3	Kolar	Malur	TMC	2021-22	69	51.75	9.0383	8	0
6	Kolar	Srinivasapura	TMC	2021-22	40	30	13.8013	9	0
				Total	**181**	**135.75**	**63.2396**	**26**	**1**

for CHIEF PROJECT OFFICER
Urban Poverty Alleviation Management Unit
Directorate of Municipal Administration
Bangalore

ABSTRACT REPORT

SFC Drinking Water PROGRAMME

Rs. [illegible]

1	2	4	5	6	7	8	9	10	11
SL.NO	District	Name Of the Town	ULB Type	YEAR	Financial Progress (Rs.in Lakhs)			Physical Progress	
					Grants Allocation	Grants Released	Expenditure	Total Approved Works	Completed Works
1	Kolar	Bangarpet	TMC	2020-21	5	5	3	1	1
3	Kolar	Malur	TMC	2020-21	5	5	4.49	1	1
6	Kolar	Srinivasapura	TMC	2020-21	5	5	0	3	0
				Total	**15**	**15**	**7.49**	**5**	**2**
1	Kolar	Bangarpet	TMC	2021-22	5	5	0	0	0
3	Kolar	Malur	TMC	2021-22	25	25	0	1	1
6	Kolar	Srinivasapura	TMC	2021-22	5	5	0	0	0
				Total	**35**	**35**	**0**	**1**	**1**

ಅನುಬಂಧ-3

ABSTRACT REPORT

SFC UNTIED PROGRAMME

Rs. in Lakhs

	2	4	5	6	7	8	9	10	11
					Financial Progress (Rs.in Lakhs)			Physical Progress	
NO	District	Name Of the Town	ULB Type	Year	Grants Allocation	Grants Released	Expenditure	Total Approved Works	Completed Works
1	Chikkaballapur	Bagepalli	TMC	2020-21	36.78	36.78	35.7646	15	15
5	Chikkaballapur	Gudibande	TP	2020-21	17.64	17.64	3.07	10	5
				Total	**54.42**	**54.42**	**38.8346**	**25**	**20**
1	Chikkaballapur	Bagepalli	TMC	2021-22	49	36.75	28.5943	10	3
5	Chikkaballapur	Gudibande	TP	2021-22	23	17.25	0.7995	16	6
				Total	**72**	**54**	**29.3938**	**26**	**9**

for CHIEF PROJECT OFFICER
Urban Poverty Alleviation Management Unit
Directorate of Municipal Administration
Bangalore

ABSTRACT REPORT

SFC Drinking Water PROGRAMME

Rs. [illegible]

1	2	4	5	6	7	8	9	10	11
SL.NO	District	Name Of the Town	ULB Type	YEAR	Financial Progress (Rs.in Lakhs)			Physical Progress	
					Grants Allocation	Grants Released	Expenditure	Total Approved Works	Completed Works
1	Chikkaballapur	Bagepalli	TMC	2020-21	10	10	1.25	3	2
5	Chikkaballapur	Gudibande	TP	2020-21	5	5	2.13	2	2
				Total	**15**	**15**	**3.38**	**5**	**4**
1	Chikkaballapur	Bagepalli	TMC	2021-22	5	5	0	1	0
5	Chikkaballapur	Gudibande	TP	2021-22	2.5	2.5	0	1	0
				Total	**7.5**	**7.5**	**0**	**2**	**0**

[illegible] - 24

NAGAROTHANA -3 RELEASE AND EXPENDITURE

ಕ್ರ.ಸಂ.	ಜಿಲ್ಲೆಯ ಹೆಸರು	ನಗರ ಸ್ಥಳೀಯ ಸಂಸ್ಥೆಗಳ ಹೆಸರು	ವರ್ಗ	[illegible]	[illegible]						[illegible]					
					2017-18	2018-19	2019-20	2020-21	2021-22	ಒಟ್ಟು	2017-18	2018-19	2019-20	2020-21	2021-22	[illegible]
		[illegible]														
1		[illegible]	[illegible]	3500.00	0.00	0.00	609.02	1615.80	275.00	2589.52	0.00	[illegible]	429.05	[illegible]	[illegible]	[illegible]
2		[illegible]	[illegible]	3500.00	0.00	[illegible]	316.50	[illegible]	350.00	2925.72	0.00	[illegible]	315.20	[illegible]	[illegible]	[illegible]
3		[illegible]	[illegible]	[illegible]	0.00	[illegible]	[illegible]	988.38	300.00	[illegible]	0.00	[illegible]	[illegible]	[illegible]	[illegible]	[illegible]
4	[illegible]	[illegible]	[illegible]	750.00	0.00	[illegible]	476.43	[illegible]	10.00	585.29	0.00	[illegible]	[illegible]	[illegible]	[illegible]	[illegible]
5		[illegible]	[illegible]	750.00	0.00	[illegible]	197.55	329.58	50.00	[illegible]	0.00	[illegible]	197.56	[illegible]	[illegible]	[illegible]
6		[illegible]	[illegible]	750.00	0.00	[illegible]	231.44	54.14	0.00	466.81	0.00	[illegible]	231.44	54.14	[illegible]	[illegible]
		[illegible]			35.51	[illegible]	21.22	75.29	50.00	236.50	35.51	[illegible]	21.22	6.57	[illegible]	[illegible]
		ಒಟ್ಟು		11750.00	35.51	357.22	2454.54	5322.11	1045.00	9214.38	35.51	357.22	2454.53	4492.79	[illegible]	[illegible]

[illegible]
[illegible]
[illegible]

ಅನುಬಂಧ 5

ನಗರೋತ್ಥಾನ (ಮುನಿಸಿಪಾಲಿಟಿ)-3ನೇ ಹಂತದ ಯೋಜನೆ

(ರೂ. ಲಕ್ಷಗಳಲ್ಲಿ)

ಕ್ರ ಸಂ.	ಜಿಲ್ಲೆಯ ಹೆಸರು	ನಗರ ಸ್ಥಳೀಯ ಸಂಸ್ಥೆಗಳ ಹೆಸರು	ವರ್ಗ	ಹಂಚಿಕೆ ಮೊತ್ತ (ರೂ.ಲಕ್ಷಗಳಲ್ಲಿ)	ಬಿಡುಗಡೆ						ವೆಚ್ಚ					
					2017-18	2018-19	2019-20	2020-21	2021-22	ಒಟ್ಟು	2017-18	2018-19	2019-20	2020-21	2021-22	ಒಟ್ಟು
1	ಚಿಕ್ಕಬಳ್ಳಾಪುರ	ಚಿಕ್ಕಬಳ್ಳಾಪುರ	ನಗರಸಭೆ	3500.00	0.00	1291.91	1211.85	146.19	319.06	2969.01	0.00	1291.91	1211.85	146.19		2649.95
2		ಚಿಂತಾಮಣಿ	ನಗರಸಭೆ	2500.00	0.00	181.45	630.87	702.52	455.16	1970.00	0.00	181.45	630.87	702.52	450.62	1965.46
3		ಶಿಡ್ಲಘಟ್ಟ	ನಗರಸಭೆ	2500.00	0.00	471.01	516.86	34.47	129.25	1151.59	0.00	471.01	516.86	34.47	141.57	1163.91
4		ಗೌರಿಬಿದನೂರು	ನಗರಸಭೆ	2500.00	0.00	0.00	397.23	518.45	313.93	1229.61	0.00	0.00	397.23	518.45	105.07	1020.75
5		ಬಾಗೇಪಲ್ಲಿ	ಪುರಸಭೆ	750.00	0.00	331.56	80.19	0.00	123.78	535.53	0.00	331.56	80.19	0.00	115.85	527.60
6		ಗುಡಿಬಂಡೆ	ಪಟ್ಟಣ ಪಂಚಾಯಿತಿ	200.00	0.00	81.97	59.94	0.00		141.91	0.00	81.97	59.94	0.00		141.91
		ಪಿಎಂಸಿ ಮತ್ತು ಇತರೆ ವೆಚ್ಚ				61.55	85.69	13.88		161.12	0.00	61.55	85.69	13.88	5.97	167.09
		ಒಟ್ಟು		11950.00	0.00	2419.45	2982.63	1415.51	1341.18	8158.77	0.00	2419.45	2982.63	1415.51	819.08	7636.67

ಯೋಜನಾ ನಿರ್ದೇಶಕರು
ಜಿಲ್ಲಾ ನಗರಾಭಿವೃದ್ಧಿ ಕೋಶ
ಚಿಕ್ಕಬಳ್ಳಾಪುರ ಜಿಲ್ಲೆ